ವಿ.72 (138)

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್‌ಗೌಡ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ:**

**ವಿಷಯ:**

**ಬೆಂಗಳೂರು ಜಲಮಂಡಳಿ ಸಾರ್ವಜನಿಕರಿಗೆ ಕುಡಿಯುವ ನೀರನ್ನು ಒದಗಿಸುತ್ತದೆ. ಸಾರ್ವಜನಿಕರು ನಿಯಮಾನುಸಾರ ಹಣ ಪಾವತಿಸಿ ಮಂಜೂರಾತಿ ಪಡೆದುಕೊಂಡಿರುತ್ತಾರೆ ಮತ್ತು ಕೆಲವರು ಮಂಜೂರಾತಿ ಪಡೆಯದೆ ನೀರಿನ ಸಂಪರ್ಕ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪಡೆದುಕೊಂಡಿರುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ನಿಯಮಾನುಸಾರ ನೀರಿನ ಸಂಪರ್ಕ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಪಡೆದವರಿಗೂ ಹಾಗೂ ಪಡೆಯದೆ ಇರುವವರಿಗೂ, ಒಳಗೊಂಡಂತೆ BWSSB ಯು ಎಲ್ಲರಿಗೂ ನೋಟೀಸ್ ನೀಡಿ ಹಣ ವಸೂಲು ಮಾಡುವ ಉದ್ದೇಶದಿಂದ, ನೋಟೀಸ್‌ನ ಅನ್ವಯ ಬಿ.ಎಂ.ಟಿ.ಎಫ್ ನವರು ಠಾಣೆಯಲ್ಲಿ ದೂರು ದಾಖಲು ಮಡಿಕೊಂಡಿರುತ್ತಾರೆ.**

**ದೂರು ದಾಖಲಿಸಿಕೊಂಡ Bangalore Metropolitan Task Force ಪೊಲೀಸ್ ಸಿಬ್ಬಂದಿ ವರ್ಗದವರು ಯಾವುದೇ ಪೂರ್ವಾಪರ ಯೋಚಿಸದೆ ಹಾಗೂ ಪರಿಶೀಲಿಸದೆ ಎಲ್ಲರಿಗೂ ಪೋಲೀಸ್ ನೋಟೀಸ್ ನೀಡಿರುತ್ತಾರೆ. ಕೋವಿಡ್ ಸಂಕಷ್ಟದಿಂದಾಗಿ ಆರ್ಥಿಕ ಸಮಸ್ಯೆಯಿಂದ ಬಳಲುತ್ತಿರುವ ಸಂದರ್ಭದಲ್ಲಿ ಇವರು ನೀಡಿರುವ ನೋಟೀಸ್‌ಗಳಿಂದ ಸಾರ್ವಜನಿಕರು ತೀರಾ ಆತಂಕಕ್ಕೊಳಗಾಗಿದ್ದು, ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ.**

**ಆದ್ದರಿಂದ Bangalore Metropolitan Task Force ನವರು ಸಾರ್ವಜನಿಕರಿಗೆ ನೀಡುತ್ತಿರುವ ಕಿರುಕುಳವನ್ನು ತಪ್ಪಿಸಿ ಸಾರ್ವಜನಿಕರ ರಕ್ಷಣೆಗೆ ನಿಲ್ಲುವ ಬಗ್ಗೆ.**

****

**ಉತ್ತರ:**

ಬೆಂಗಳೂರು ಜಲಮಂಡಳಿಯು ಸಾರ್ವಜನಿಕರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿದ್ದು, ಸಾರ್ವಜನಿಕರು ನಿಯಮಾನುಸಾರ ಧಾಮಾಷ ಶುಲ್ಕ, ಇತರೆ ಶುಲ್ಕಗಳನ್ನು ಪಾವತಿಸಿ ಸಂಪರ್ಕವನ್ನು ಪಡೆಯಬೇಕಾಗಿರುತ್ತದೆ. ಆದರೆ ಕೆಲವರು ಬೆಂಗಳೂರು ಜಲಮಂಡಳಿಯ ನೀರು ಹಾಗೂ ಒಳಚರಂಡಿ ಕೊಳವೆ ಮಾರ್ಗಗಳಿಂದ ಅನಧಿಕೃತವಾಗಿ ಸಂಪರ್ಕವನ್ನು ಪಡೆದಿದ್ದು, ಅಂತಹ ಕಟ್ಟಡದ ಮಾಲೀಕರ ವಿರುದ್ಧ ಬೆಂಗಳೂರು ಜಲಮಂಡಳಿಯು ನೋಟೀಸನ್ನು ಜಾರಿ ಮಾಡಿ, ಸಂಪರ್ಕವನ್ನು ಕಡಿತಗೊಳಿಸಿರುತ್ತದೆ.

ಬೆಂಗಳೂರು ಜಲಮಂಡಳಿಗೆ ಯಾವುದೇ ಧಾಮಾಷ ಶುಲ್ಕ, ಇತರೆ ಶುಲ್ಕಗಳನ್ನು ಪಾವತಿಸದೆ ಅನಧಿಕೃತವಾಗಿ ಮರುಜೋಡಣೆ ಮಾಡಿರುವಂತಹ ಕಟ್ಟಡದ ಮಾಲೀಕರ ವಿರುದ್ಧ ಬೆಂಗಳೂರು ಜಲಮಂಡಳಿ ಕಾಯ್ದೆಯ ಸೆಕ್ಷನ್ 108ಎ, 75 ಮತ್ತು 85 ರ ಪ್ರಕಾರ ಅನಧಿಕೃತ ಸಂಪರ್ಕ ಪಡೆಯುವುದು ಶಿಕ್ಷಾರ್ಹ ಅಪರಾಧವಾಗಿರುವುದರಿಂದ Bangalore Metropolitan Task Force ನಲ್ಲಿ ದೂರು ದಾಖಲಿಸಲಾಗಿರುತ್ತದೆ. ಮಂಜೂರಾತಿ ಪಡೆದುಕೊಂಡು ತಿಂಗಳ ನೀರಿನ ಶುಲ್ಕವನ್ನು ಬಾಕಿ ಉಳಿಸಿಕೊಂಡಿದ್ದರೂ ಅಂತಹ ಗ್ರಾಹಕರ ವಿರುದ್ಧ Bangalore Metropolitan Task Force ಗೆ ದೂರು ನೀಡುತ್ತಿಲ್ಲ ಬದಲಾಗಿ ಬೆಂಗಳೂರು ಜಲಮಂಡಳಿ ವತಿಯಿಂದಲೇ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

**ಸಂಖ್ಯೆ: ನಅಇ 48 ಎಂಎನ್‌ಐ 2021**

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ